7

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ      ದಿನಾಂಕ : DATE : 11/03/202

ಸದನ ಜಟಾಪಟಿ

# ಸುಧಾಕರ್ ವಿರುದ್ಧ ರಮೇಶ್ ಅಶ್ಲೀಲ ಹೇಳಿಕೆ

## ಅನರ್ಹತೆ ತೀರ್ಪಿನ ಬಗ್ಗೆ ಪ್ರಸ್ತಾಪಿಸಿ ವಾಗ್ದಾಳಿ ನಡೆಸಿದ ಸುಧಾಕರ್ | ಅಶ್ಲೀಲ ಪದ ಬಳಸಿ ನಿಂದಿಸಿದ ರಮೇಶಕುಮಾರ್

11/3/20

• **ಕನ್ನಡಪ್ರಭ ವಾರ್ತೆ** ವಿಧಾನಸಭೆ

ಅನರ್ಹತೆ ಕುರಿತ ತೀರ್ಪಿನ ಬಗ್ಗೆ ಪ್ರಸ್ತಾಪ ಮಾಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ವಿರುದ್ಧ ಮಾಜಿ ಸಭಾಧ್ಯಕ್ಷ ರಮೇಶ್ ಕುಮಾರ್ ನೀಡಿದ ಅಶ್ಲೀಲ ಹೇಳಿಕೆಯು ಮಂಗಳವಾರ ಸದನದಲ್ಲಿ ಆಡಳಿತ ಮತ್ತು ಪ್ರತಿಪಕ್ಷದ ನಡುವೆ ಮಾತಿನ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿತು.



ರಮೇಶ್‌ಕುಮಾರ್ ಮತ್ತು ಡಾ.ಕೆ.ಸುಧಾಕರ್ ನಡುವೆ ಏಕವಚನದಲ್ಲಿ ವೈಯಕ್ತಿಕ ನಿಂದನೆ ಹಾಗೂ ಜಟಾಪಟಿಯಿಂದ ತೀವ್ರ ಕೋಲಾಹಲ ಸೃಷ್ಟಿಯಾಯಿತು. ಸಭಾಧ್ಯಕ್ಷರಾಗಿದ್ದ ವೇಳೆ ಪಕ್ಷಾಂತರಗೊಂಡ ಶಾಸಕರ ಬಗ್ಗೆ ನೀಡಿದ ತೀರ್ಪಿನ ಪ್ರಸ್ತಾಪಕ್ಕೆ ಆವೇಶಭರಿತರಾಗಿ ರಮೇಶ್‌ಕುಮಾರ್ ಸದನದಲ್ಲಿ ನೀಡಿದ ಅಶ್ಲೀಲ ಹೇಳಿಕೆಯು ಸುಧಾಕರ್ ಅವರನ್ನು ಕೆರಳಿಸಿತು. ಇಬ್ಬರ ನಡುವೆ ವೈಯಕ್ತಿಕವಾಗಿ ಏಕವಚನದಲ್ಲಿ ನಿಂದನೆ ನಡೆದಾಗ ಆಕ್ರೋಶಗೊಂಡ ರಮೇಶ್ ಕುಮಾರ್ ಅವರು ಸಭಾಧ್ಯಕ್ಷರ ಪೀಠದ ಮುಂದೆ ಸದನದ ಬಾವಿಗಿಳಿದು ಧರಣಿ ನಡೆಸಿದರು. ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ಮಿತಿಮೀರಿದ ಪರಿಣಾಮ ಸದನವನ್ನು ಐದು ನಿಮಿಷಗಳ ಕಾಲ ಮುಂದೂಡಲಾಯಿತು.

➘ 5

## ರಮೇಶ್ ವಿರುದ್ಧ ಬಿಜೆಪಿ ಹಕ್ಕುಚ್ಯುತಿ ಮಂಡನೆ

### ರಮೇಶ ಉಚ್ಚಾಟನೆಗೆ ಒತ್ತಾಯ




ಬೆಂಗಳೂರು: ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ವಿರುದ್ಧ ಪ್ರತಿಪಕ್ಷ ಕಾಂಗ್ರೆಸ್ ವಿಧಾನಸಭೆಯಲ್ಲಿ ಹಕ್ಕುಚ್ಯುತಿ ಮಂಡನೆಗೆ ಮುಂದಾದ ಬೆನ್ನಲ್ಲೇ ಆಡಳಿತಾರೂಢ ಬಿಜೆಪಿ ಸಹ ಮಾಜಿ ಸಭಾಧ್ಯಕ್ಷ ರಮೇಶ್‌ಕುಮಾರ್ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ನಿರ್ಧರಿಸಿದೆ. ವಿಧಾನಸೌಧದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಸಚಿವ ಡಾ.ಕೆ.ಸುಧಾಕರ್, ನನ್ನ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ ಮಂಡನೆಗೆ ಮುಂದಾಗಿದೆ.

➘ 5

## ಸುಧಾಕರ್ ವಿರುದ್ಧ ಹಕ್ಕುಚ್ಯುತಿ ಮಂಡನೆ

### ವಿಪಕ್ಷ ನಾಯಕ [illegible] ಘೋಷಣೆ



ಬೆಂಗಳೂರು: ಸಚಿವ ಸುಧಾಕರ್ ಉದ್ಧಟತನದ ವರ್ತನೆಯಿಂದ ಸಭಾಧ್ಯಕ್ಷ ಸ್ಥಾನ ಹಾಗೂ ಸದನದ ಹಕ್ಕುಚ್ಯುತಿಯಾಗಿದೆ. ಹಾಗಾಗಿ ಅವರ ವಿರುದ್ಧ ಹಕ್ಕು ಚ್ಯುತಿ ಪ್ರಸ್ತಾವನೆ ಸಲ್ಲಿಸಲಿದ್ದು, ಬುಧವಾರ ಸದನದಲ್ಲಿ ಇದನ್ನು ಪ್ರಸ್ತಾಪಿಸುತ್ತೇವೆ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ರಮೇಶ್ ಕುಮಾರ್ ಅವರು ಸ್ಪೀಕರ್ ಆಗಿದ್ದಾಗ [illegible] ಅನರ್ಹಗೊಳಿಸಿದ ಆದೇಶವನ್ನು ಸದನದಲ್ಲಿ ಟೀಕಿಸಿದ ಸುಧಾಕರ್, ಅವಹೇಳನಕಾರಿಯಾಗಿ ಮಾತನಾಡಿದ್ದಾರೆ.

➘ 5

## ಸುಧಾಕರ್ ವಿರುದ್ಧ ಹಕ್ಕುಚ್ಯುತಿ ಮಂಡನೆ

➘ ಮೊದಲ ಪುಟದಿಂದ

ರಮೇಶ್ ಕುಮಾರ್ ಸದರಿ ಆದೇಶ ಮಾಡಿದ್ದು ಸ್ಪೀಕರ್ ಆಗಿಯೇ ಹೊರತು ರಮೇಶ್ ಕುಮಾರ್ ಆಗಿ ಅಲ್ಲ. ಎರಡೂ ಕಡೆ ವಿಚಾರಣೆ ನಡೆಸಿ, ವಾದ ವಿವಾದ ಕೇಳಿ ಅವರು ಆದೇಶ ಮಾಡಿದ್ದರು. ಆದರೆ, ಸುಧಾಕರ್ ಮಾತನಾಡುವಾಗ 'ಸ್ಪೀಕರ್ ಪೀಠದಿಂದ ಮಾಡಿದ ಆದೇಶದಿಂದ ನಾವು ಸದಸ್ಯತ್ವ ಕಳೆದುಕೊಂಡೆವು. ಮಾನಸಿಕ ಹಿಂಸೆ ಕೊಟ್ಟು ನಮ್ಮನ್ನು ಅನರ್ಹಗೊಳಿಸಿದರು' ಎಂದು ಉಲ್ಲೇಖಿಸಿದ್ದಾರೆ. ಇದರಿಂದ ಇಡೀ ಸದನಕ್ಕೆ, ಸ್ಪೀಕರ್ ಪೀಠಕ್ಕೆ ಅಗೌರವವಾಗಿದೆ. ರಮೇಶ್ ಕುಮಾರ್ ಅವರ ಘನತೆಗೂ ಕುಂದುಂಟಾಗಿದೆ. ಇಂತಹ ಹೇಳಿಕೆ ನೀಡಿದ ಸುಧಾಕರ್ ಸದನದಲ್ಲಿರಲು ಯೋಗ್ಯರಲ್ಲ. ಇದನ್ನು ಬುಧವಾರ ಪ್ರಸ್ತಾಪಿಸುತ್ತೇವೆ ಎಂದರು.

**ಸರ್ಕಾರದ್ದು ಗೂಂಡಾವರ್ತನೆ:** ಸುಧಾಕರ್ ಅವರ ವಿರುದ್ಧ ನಾವು ಮಂಡಿಸಿದ ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಸದನದಲ್ಲಿ ಪ್ರಸ್ತಾಪಿಸಲೂ ಬಿಡದೆ ಸರ್ಕಾರ ನಡೆಸುವವರೇ ಗೂಂಡಾವರ್ತನೆ ತೋರಿದ್ದು ಖಂಡನೀಯ. ಇದು ಪ್ರಜಾಪ್ರಭುತ್ವ ಮತ್ತು ಸಂವಿಧಾನ ವಿರೋಧಿ ನಡವಳಿಕೆ ಎಂದು ಇದೇ ವೇಳೆ ಸಿದ್ದರಾಮಯ್ಯ ಕಿಡಿ ಕಾರಿದರು. ಗದ್ದಲ ಆಗಲು ಬಿಜೆಪಿ ಸದಸ್ಯರು, ಮಂತ್ರಿಗಳೇ ಕಾರಣ. ಹಕ್ಕು ಚ್ಯುತಿ ಪ್ರಸ್ತಾವನೆ ಮಂಡಿಸಲು ಅವಕಾಶ ಕೇಳಲೂ ಬಿಡದೆ ಸರ್ಕಾರದವರೇ ಗದ್ದಲವೆಬ್ಬಿಸಿದರೆ.ಪ್ರಜಾಪ್ರಭುತ್ವ ವಿರೋಧಿ ನಡೆ ಎನ್ನಬೇಕಾಗುತ್ತದೆ ಎಂದರು.

**ರಮೇಶ್ ಕುಮಾರ್ ಸದನದಲ್ಲಿ ಮಾತನಾಡೇ ಇಲ್ಲ:** ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಅವರು ಸದನದಲ್ಲಿ ಏನೂ ಮಾತನಾಡಿಯೇ ಇಲ್ಲ, ಅವರು ಸದನಕ್ಕೆ ಬರುತ್ತಿದ್ದಂತೆ ಕಲಾಪ ಮುಂದೂಡಿಕೆಯಾಯಿತು. ಅವರ ಯಾವ ಮಾತುಗಳೂ ಕಡತಕ್ಕೆ ಹೋಗಿಲ್ಲ ಎಂದು ಇದೇ ವೇಳೆ ಸಿದ್ದರಾಮಯ್ಯ ಸಮರ್ಥಿಸಿಕೊಂಡರು. ರಮೇಶ್ ಕುಮಾರ್ ಅವರೂ ಕೂಡ ಸದನದಲ್ಲಿ ಅವಾಚ್ಯ ಶಬ್ದಗಳನ್ನು ಬಳಸಿದ್ದಾರೆ ಅವರ ವಿರುದ್ಧವೂ ಹಕ್ಕು ಚ್ಯುತಿ ಮಂಡಿಸುತ್ತೇವೆ. ಅಮಾನತಿಗೆ ಆಗ್ರಹಿಸಿ ಹೋರಾಟ ಮಾಡುತ್ತೇವೆ ಎಂದು ಬಿಜೆಪಿಯವರು ಹೇಳಿದ್ದಾರಲ್ಲಾ ಎಂಬ ಸುದ್ದಿಗಾರರ ಪ್ರಶ್ನೆಗೆ ಸಿದ್ದರಾಮಯ್ಯ ಈ ಸಮರ್ಥನೆ ನೀಡಿದರು.

ಕನ್ನಡ ಪ್ರಭ ದಿನಾಂಕ 11/3/2020

8(a)

# ಸುಧಾಕರ್ ವಿರುದ್ಧ ಅಶ್ಲೀಲ ಹೇಳಿಕೆ

ಮೊದಲ ಪುಟದಿಂದ

ಆದರೆ, ಐದು ನಿಮಿಷಗಳ ಬಳಿಕ ಆರಂಭವಾಗಬೇಕಿದ್ದ ಕಲಾಪವು ಒಂದು ತಾಸಿಗಿಂತ ಹೆಚ್ಚಿನ ಅವಧಿಯ ಬಳಿಕ ಕಲಾಪ ಆರಂಭಗೊಂಡಾಗ ವಾಕ್ಸಮರ ಮುಂದುವರಿಯಿತು. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಸಚಿವ ಸುಧಾಕರ್ ವಿರುದ್ಧ ಹಕ್ಕುಚ್ಯುತಿ ಮಂಡನೆ ಮಾಡುವ ಕುರಿತು ಚರ್ಚಿಸಲು ಮುಂದಾದರು. ಸಿದ್ದರಾಮಯ್ಯ ಮಾತಿಗೂ ಅವಕಾಶ ನೀಡದ ಬಿಜೆಪಿ ಸದಸ್ಯರು, ರಮೇಶ್ ಕುಮಾರ್ ಅವರನ್ನು ಅಮಾನತುಗೊಳಿಸಬೇಕು ಎಂದು ಆಗ್ರಹಿಸಿದರು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದ ಕಾರಣ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕಲಾಪವನ್ನು ಬುಧವಾರ ಮುಂದೂಡಿದರು.

**ಸಂಘರ್ಷಕ್ಕೆ ಕಾರಣ ಏನು:** ಸಂವಿಧಾನ ಮೇಲಿನ ವಿಶೇಷ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಸಚಿವ ಡಾ.ಕೆ.ಸುಧಾಕರ್ ಒಂದು ಹಂತದಲ್ಲಿ ಪಕ್ಷಾಂತರಗೊಂಡ ವೇಳೆ ತಮ್ಮ ಶಾಸಕತ್ವವನ್ನು ಅನರ್ಹತೆಗೊಳಿಸಿದ ವಿಚಾರವನ್ನು ಪ್ರಸ್ತಾಪಿಸಿದರು. ದೇಶದಲ್ಲಿ ಹಲವು ಸಂವಿಧಾನಬದ್ಧ ಪೀಠಗಳಿವೆ. ಈ ಪೈಕಿ ರಾಜ್ಯ ವಿಧಾನಸಭೆಯ ಸಭಾಧ್ಯಕ್ಷ ಪೀಠವು ಸೇರಿದೆ. ಆ ಪೀಠದಿಂದ ಅನ್ಯಾಯವಾಗಿದ್ದು, ಅನ್ಯಾಯಕ್ಕೊಳಗಾ ದವರಲ್ಲಿ ನಾನೂ ಒಬ್ಬ ಎಂದು ಹೇಳಿದರು. ಈ ವೇಳೆ ಸಭಾಧ್ಯಕ್ಷ ಪೀಠದಲ್ಲಿದ್ದ ಶಿವಾನಂದ ಪಾಟೀಲ್ ಅವರು ಪೀಠದ ವಿಷಯಕ್ಕೆ ಯಾಕೆ ಹೋಗುತ್ತೀರಿ, ನ್ಯಾಯಾಲಯಕ್ಕೆ ಹೋಗಿದ್ದೀರಲ್ಲ, ಆ ವಿಚಾರದ ಚರ್ಚೆ ಬೇಡ ಎಂದು ಕಿವಿಮಾತು ಹೇಳಿದರು.

ಆದರೂ ಅದನ್ನು ಪರಿಗಣಿಸದೆ ಮಾತು ಮುಂದುವರಿಸಿದ ಸುಧಾಕರ್ ಅವರು, ಸುಪ್ರೀಂಕೋರ್ಟ್‌ನ ತೀರ್ಪನ್ನು ಪ್ರಸ್ತಾಪಿಸಿದರು. ನ್ಯಾಯಾಲಯವು ತಮ್ಮ ಪರ ತೀರ್ಪು ನೀಡದಿದ್ದರೆ 17 ಮಂದಿಯ ಜೀವನ ಹಾಳಾಗುತ್ತಿತ್ತು. ಇದರ ಹಿಂದೆ ರಾಜಕೀಯ ಷಡ್ಯಂತ್ರ ಇತ್ತು. 8 ತಿಂಗಳು ಅಜ್ಞಾತವಾಸ ಅನುಭವಿಸಿದ್ದೇವೆ ಎಂದು ಹೇಳಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರಾದ ಪ್ರಿಯಾಂಕ್ ಖರ್ಗೆ, ಯು.ಟಿ.ಖಾದರ್ ಸೇರಿದಂತೆ ಹಲವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಪ್ರತಿಪಕ್ಷದ ಮೊಗಸಾಲೆಗೆ ತೆರಳಿದ್ದ ಮಾಜಿ ಸಭಾಧ್ಯಕ್ಷ ರಮೇಶ್‌ಕುಮಾರ್ ಅವರು ತಾವು ನೀಡಿರುವ ತೀರ್ಪಿನ ಬಗ್ಗೆ ಚರ್ಚೆಯಾಗುತ್ತಿರುವುದನ್ನು ಆಲಿಸಿ ಸದನಗೊಳಗೆ ಬಂದು ಸರ್ಕಾರದ ವಿರುದ್ಧ ಹರಿಹಾಯ್ದರು.

ಈ ಹಿಂದೆ ನೀಡಿದ ತೀರ್ಪಿನ ಬಗ್ಗೆ ಚರ್ಚೆಯಾಗಬೇಕೇ? ಕಾನೂನು ಸಚಿವರೇ ಹೇಳಿ ಚರ್ಚೆ ನಡೆಯಬೇಕಾ ಎಂದು ಸರ್ಕಾರ ಮತ್ತು ಸುಧಾಕರ್ ವಿರುದ್ಧ ಟೀಕಾಪ್ರಹಾರ ನಡೆಸಿದರು. ಸುಧಾರಕರ್ ಅವರು ಸಹ ಪ್ರತಿಯಾಗಿ ಏಕವಚನದಲ್ಲಿ ಕಿಡಿಕಾರಿದರು. ಈ ವೇಳೆ ಆವೇಶಕ್ಕೊಳಗಾದ ರಮೇಶ್‌ಕುಮಾರ್ ಅವರು ಸುಧಾಕರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಅಶ್ಲೀಲ ಪದ ಬಳಕೆ ಮಾಡಿದರು. ಇದರಿಂದ ಕುಪಿತಗೊಂಡ ಸುಧಾಕರ್ ಅವರು 'ನೀನೊಬ್ಬ ನಾಟಕಕಾರ.. ನಿನ್ನಂಥವನನ್ನು ನೋಡಿದ್ದೇನೆ..' ಎಂದು ವಾಗ್ದಾಳಿ ನಡೆಸಿದರು.

ಸುಧಾಕರ್ ವರ್ತನೆಗೆ ಕೋಪಗೊಂಡ ರಮೇಶ್ ಕುಮಾರ್ ಧರಣಿಗಿಳಿದರು. ಈ ಸಂಬಂಧ ಕೋಲಾಹಲ ತೀವ್ರಗೊಂಡಾಗ ಸದನ ಮುಂದೂಡಲಾಯಿತು.

# ರಮೇಶ್ ವಿರುದ್ಧ ಹಕ್ಕುಚ್ಯುತಿ ಮಂಡನೆ

ಮೊದಲ ಪುಟದಿಂದ

ಬಿಜೆಪಿ ಸದಸ್ಯರು ಸಹ ರಮೇಶ್‌ಕುಮಾರ್ ನಡೆಯನ್ನು ವಿರೋಧಿಸಿ ಉಚ್ಚಾಟನೆಗೆ ಒತ್ತಾಯಿಸಲು ಮತ್ತು ಹಕ್ಕುಚ್ಯುತಿ ಮಂಡನೆ ಮಾಡಲು ನಿರ್ಧರಿಸಿದ್ದಾರೆ ಎಂದು ತಿಳಿಸಿದರು. ಈ ಹಿಂದೆ 17 ಮಂದಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೆವು. ಆದರೆ ಅಂದಿನ ಸಭಾಧ್ಯಕ್ಷರಾಗಿದ್ದ ರಮೇಶ್ ರಾಜೀನಾಮೆ ತಿರಸ್ಕರಿಸಿದ್ದರು. ಅದನ್ನು ಜನತೆ ಮುಂದೆ ಇರಿಸಲೆಯತ್ನಿಸುತ್ತಿದ್ದೆ. ಅದನ್ನು ತಡೆಯಲು ರಮೇಶ್ ಕುಮಾರ್ ಮುಂದಾದರು. ನನ್ನ ವಿರುದ್ಧ ಅವಹೇಳನಕಾರಿ ಪದ ಬಳಕೆ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಪ್ರಸಕ್ತ ಅಧಿವೇಶನ ಮುಗಿಯುವವರೆಗೆ ರಮೇಶ್ ಕುಮಾರ್ ಅವರನ್ನು ಉಚ್ಚಾಟನೆ ಮಾಡಬೇಕು. ಅಲ್ಲದೇ, ಅವರ ವಿರುದ್ಧ ಹಕ್ಕುಚ್ಯುತಿ ಮಂಡನೆ ಮಾಡಲಾಗುವುದು. ಸದನದಲ್ಲಿ ಅವರು ಯಾರ ಮಾತನ್ನೂ ಕೇಳಲು ತಯಾರಿಲ್ಲ. ಸದನದ ಗೌರವವನ್ನು ಉಳಿಸುವ ಕೆಲಸ ಮಾಡಬೇಕು. ಇದು ವೈಯಕ್ತಿಕ ಜಟಾಪಟಿ ಅಲ್ಲ. ಅವರ ಪಕ್ಷದ ಭವಿಷ್ಯದ ಸಲುವಾಗಿ ನಮ್ಮ ಜತೆ ಚೆಲ್ಲಾಟವಾಡಿದರು. ನನ್ನ ವಿರುದ್ಧ ರಾಜಕೀಯ ಷಡ್ಯಂತ್ರ ನಡೆಯುತ್ತಿತ್ತು. ರಮೇಶ್ ಕುಮಾರ್ ಅವರಿಗೆ ನಾಟಕ ಮಾಡುವುದು ಚೆನ್ನಾಗಿ ಗೊತ್ತಿದೆ. ಅದಕ್ಕಾಗಿ ಅವರು ಸದನಕ್ಕೆ ಬಂದಿಲ್ಲ ಎಂದು ಹೇಳಿದರು. ನಮ್ಮನ್ನು ಅನರ್ಹ ಎಂದು ಆರು ತಿಂಗಳು ಕರೆದರು. ಅನರ್ಹತೆ ಕುರಿತ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಅಂಶಗಳನ್ನು ಓದಿ ಹೇಳುತ್ತಿದ್ದೆ. ಆಗ ಅವರಿಗೆ ತಮ್ಮ ತಪ್ಪಿನ ಅರಿವಾಗಿರಬೇಕು. ಅದಕ್ಕಾಗಿ ನನ್ನ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದರು. ಇದು ಯಾವ ಪೂರ್ವ ತಯಾರಿಯಲ್ಲ. ನಮಗಾದ ಅನ್ಯಾಯವನ್ನು ಹೇಳಿಕೊಳ್ಳಲು ಶಾಸನಸಭೆ ನಮಗೆ ವೇದಿಕೆಯಾಗಿದೆ. ಅದಕ್ಕಾಗಿ ನಮಗಾದ ಅನ್ಯಾಯದ ಬಗ್ಗೆ ವಿವರಿಸುತ್ತಿದ್ದೆ ಎಂದು ಸುಧಾಕರ್ ತಿಳಿಸಿದರು.